**<u>ದಿನಾಂಕ: 30-05-2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

<u>ಪಾಟೀ ಸವಾಲು: ಶ್ರೀ ಜಿ ಸಿ ಎಂ ಪ್ರತಿವಾದಿಗಳ ಪರ ವಕೀಲರಿಂದ</u>

ನಾನು ಚಿನ್ನ ಬೆಳ್ಳಿ ವ್ಯಾಪಾರ ಮಾಡುತ್ತೇನೆ. ನಾನು ನಡೆಸುವ ಅಂಗಡಿಯೂ ಚಳ್ಳಕೆರೆ ಮುಖ್ಯ ವೃತ್ತದಲ್ಲಿ ಇರುತ್ತದೆ. ನನ್ನ ಸ್ವಂತ ಊರು ಮೀರಾಸಾಬಿಹಳ್ಳಿ ಆಗಿರುತ್ತದೆ. ನಾನು ಹುಟ್ಟಿದಾಗಿನಿಂದ ಚಳ್ಳಕೆರೆಯಲ್ಲಿಯೇ ವಾಸವಿದ್ದೇನೆ. ನಾನು ಮತ್ತು ನನ್ನ ಕುಟುಂಬದವರು ಮೀರಾಸಾಬಿಹಳ್ಳಿಯಲ್ಲಿ ವಾಸವಿರುವುದಿಲ್ಲ. ಸಾಕ್ಷಿಯು ಮುಂದುವರೆದು ನನ್ನ ಅಣ್ಣ ತಮ್ಮಂದಿರು ಸದರಿ ಮೀರಾಸಾಬಿಹಳ್ಳಿಯಲ್ಲಿ ವಾಸವಿದ್ದಾರೆ ಎಂದು ಉತ್ತರಿಸುತ್ತಾರೆ.

1 ರಿಂದ 4 ನೇ ಪ್ರತಿವಾದಿಯವರು ನನಗೆ ಅಂದಾಜು 15 ವರ್ಷದಿಂದ ಪರಿಚಯಸ್ಥರು. ಸದರಿಯವರುಗಳು ಗೊರ್ಲಕಟ್ಟೆ ಗ್ರಾಮದ ವಾಸಿಗಳು. 1ನೇ ಪ್ರತಿವಾದಿ ಈರಣ್ಣ ನನಗೆ ಗೊರ್ಲಕಟ್ಟೆ ಗ್ರಾಮದ ಚಂದ್ರಣ್ಣನ ಕಡೆಯಿಂದ ಪರಿಚಯರಾಗಿರುತ್ತಾರೆ. ಸದರಿ ಚಂದ್ರಣ್ಣರವರು ಕೂಡ ನನಗೆ 15 ವರ್ಷದಿಂದ ಪರಿಚಯಸ್ಥರು. ಚಂದ್ರಣ್ಣರವರು ನನಗೆ ವ್ಯವಹಾರದಲ್ಲಿ ವಿಶ್ವಾಸಿಗರು ಆಗಿರುತ್ತಾರೆ. ಚಂದ್ರಣ್ಣರವರು ವ್ಯವಸಾಯವನ್ನು ಮಾಡುತ್ತಾರೆ. ನಿಪಿ:1 ಕ್ರಯದ ಕರಾರು ಪತ್ರಕ್ಕೆ ಸಾಕ್ಷಿದಾರರಾಗಿ ಸಹಿ ಮಾಡಿದ ವ್ಯಕ್ತಿಯೇ ಸದರಿ ಚಂದ್ರಣ್ಣ ಆಗಿರುತ್ತಾರೆ. ಸದರಿ ಚಂದ್ರಣ್ಣರವರು 1 ರಿಂದ 4 ನೇ ಪ್ರತಿವಾದಿಯರಿಗೆ ಸಂಬಂಧಿಕರಾಗಿದ್ದಾರೆ.

1 ನೇ ಪ್ರತಿವಾದಿ ಈರಣ್ಣನಿಗೆ ಇಬ್ಬರು ಗಂಡು ಮಕ್ಕಳು ಮತ್ತು ಒಂದು ಹೆಣ್ಣು ಮಗಳು ಜನಿಸಿರುತ್ತಾರೆ. ನಿಪಿ:1 ರ ಕ್ರಯದ ಕರಾರು ಪತ್ರವನ್ನು ಪ್ರತಿವಾದಿಯವರು ನನಗೆ ಬರೆದುಕೊಡುವಾಗ 1 ನೇ ಪ್ರತಿವಾದಿಗೆ ಒಬ್ಬಳು ಹೆಣ್ಣು ಮಗಳು ಇರುವ ಬಗ್ಗೆ ನನಗೆ ಗೊತ್ತಿರಲಿಲ್ಲ ಕಾರಣ ಸದರಿ ಹೆಣ್ಣು ಮಗಳಿಗೆ ವಿವಾಹ ಮಾಡಿಕೊಟ್ಟಿರುತ್ತಾರೆ ಎಂದು ಮಾತ್ರ ತಿಳಿಸಿರುತ್ತಾರೆ ಎಂದು ಉತ್ತರಿಸುತ್ತಾರೆ. ನನ್ನ ಮತ್ತು ಪ್ರತಿವಾದಿಯರ ನಡುವಿನ ವ್ಯವಹಾರದ ಸಮಯದಲ್ಲಿ ಸದರಿ ವಿವಾಹದ ವಿಚಾರ ತಿಳಿದಿತ್ತು.

ದಾವಾ ಅನುಸೂಚಿ ಸ್ವತ್ತು 1 ನೇ ಪ್ರತಿವಾದಿಗೆ ಸದರಿಯವರ ಅಣ್ಣ ತಮ್ಮಂದಿರ ನಡುವೆ ಆದಂತಹ ಪಾಲುವಿಭಾಗದ ಮುಖಾಂತರ ಬಂದಂತಹ ಆಸ್ತಿಯಾಗಿರುತ್ತದೆ ಎಂದು ನಾನು ತಿಳಿದುಕೊಂಡಿರುತ್ತೇನೆ. ದಾವಾ ಅನುಸೂಚಿ ಸ್ವತ್ತು ಒಟ್ಟು ಕುಟುಂಬದ ಪಿತ್ರಾರ್ಜಿತ ಆಸ್ತಿ ಆಗಿತ್ತು ಎಂದು ಸೂಚಿಸಿದ ಪ್ರಶ್ನೆ ಸಾಕ್ಷಿಯು ಪಾಲುವಿಭಾಗದ ಮುಖಾಂತರ ದಾವಾ ಅನುಸೂಚಿ ಸ್ವತ್ತು ಪ್ರತಿವಾದಿಯರಿಗೆ ಬಂದಿರುತ್ತದೆ ಎಂದು ನನಗೆ ತಿಳಿಸಿದ್ದರು ಎಂದು ಸಾಕ್ಷಿ ಉತ್ತರಿಸುತ್ತಾರೆ.

ಸಾಮಾನ್ಯವಾಗಿ ಯಾವುದೇ ಸ್ವತ್ತು ಪಾಲುವಿಭಾಗ ಆಗಬೇಕಿದ್ದಲ್ಲಿ ಸದರಿ ಸ್ವತ್ತು ಒಟ್ಟು ಕುಟುಂಬದ ಅಥವಾ ಪಿತ್ರಾರ್ಜಿತ ಆಸ್ತಿ ಆಗಿದ್ದಲ್ಲಿ ಮಾತ್ರ ಪಾಲುವಿಭಾಗ ಮಾಡಿಕೊಳ್ಳಲು

ಅವಕಾಶವಿದೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಅನುಸೂಚಿ ಸ್ವತ್ತು ಪಿತ್ರಾರ್ಜಿತ ಆಸ್ತಿ ಆಗಿರುವ ಕಾರಣ 1 ನೇ ಪ್ರತಿವಾದಿಯ ಮಗಳಾದ ಲತಮ್ಮರವರಿಗೂ ಸಹ 1 ನೇ ಪ್ರತಿವಾದಿಗೆ ಇದ್ದಂತಹ ಹಕ್ಕು ಮತ್ತು ಅಧಿಕಾರಿ ಸದರಿ ಲತಮ್ಮರವರಿಗೆ ಸದರಿ ದಾವಾ ಅನುಸೂಚಿ ಸ್ವತ್ತಿನಲ್ಲಿ ಇತ್ತು ಎಂದರೆ ನನಗೆ ಗೊತ್ತಿಲ್ಲ.

**(ಮುಂದುವರೆದ ಪಾಟೀ ಸವಾಲಿಗೆ ಪ್ರತಿವಾದಿ ಪರ ವಕೀಲರು ಸಮಯಾವಕಾಶ ಕೋರಿದ್ದು ಸದರಿ ಕೋರಿಕೆಯನ್ನು ಅನುಮತಿಸಲಾಯಿತು ಮತ್ತು ಪಾಟೀ ಸವಾಲನ್ನು ಮುಂದೂಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿಯಿದೆ,

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ.